ದಿನಾಂಕಃ 18.06.2024
(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)

<u>ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎ ಬಿ ಕೆ., ವಕೀಲರಿಂದಃ</u>

2. ದಿಃ 13.03.2023 ರ ವೇಳೆಗಾಗಲೇ ಡಿಡಬ್ಲ್ಯೂ 1 ರವರು ತನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಮತ್ತು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು ಎಂದರೆ ಸರಿ. ಸದರಿ ದಾಖಲಾತಿಗಳಲ್ಲಿ ಅವರ ಮಕ್ಕಳ ವ್ಯಾಸಂಗದ ದೃಢೀಕರಣ ಪ್ರಮಾಣಪತ್ರವನ್ನು ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ 1 ನೇ ಪ್ರತಿವಾದಿರವರ ಸಹೋದರಿಯರು ಇರುವ ವಿಚಾರವಾಗಿ ವಂಶವೃಕ್ಷವನ್ನು ಸಹ ಹಾಜರುಪಡಿಸಿದ್ದಾರೆ ಎಂದರೆ ಸರಿ.

3. ಈಗಲೂ ಸಹ 1 ನೇ ಪ್ರತಿವಾದಿಯ ಮಕ್ಕಳು ಸಹೋದರಿಯರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಈ ವಿಚಾರಗಳು ಗೊತ್ತಿದ್ದರೂ ಸಹ ಸುಳ್ಳು ದಾವೆಯನ್ನು ಸಲ್ಲಿಸಿ ಪ್ರತಿವಾದಿಗಳಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

4. ದಾವಾ ಸ್ವತ್ತಿನ ಕೆಲವು ಸ್ವತ್ತುಗಳು ದಾನಪತ್ರದ ಮೂಲಕ ನಿಂಗಮ್ಮನವರಿಗೆ ಸೇರಿದ ವಿಚಾರ ಗೊತ್ತಿದ್ದರೂಾ ಸಹ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ.</u>

<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).</u>

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ಎನ್.ಉಷಾರಾಣಿ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಚನ್ನಪಟ್ಟಣ.